(ಇಂದು ದಿನಾಂಕಃ 18-07-2025 ರಂದು ಸತ್ಯಪ್ರತಿಜ್ಞೆಯ ಮೇರೆಗೆ ಪ್ರಮಾಣವಚನ ಬೋಧಿಸಲಾಯಿತು.)

**ಪಾಟೀ ಸವಾಲು – ವಾದಿ ಪರ ಶ್ರೀ ಬಿ.ಎಸ್.ಯು ವಕೀಲರಿಂದಃ**

ನಾನು 12 ವರ್ಷಗಳಿಂದ ಶ್ರೀ ಸಾಯಿ ಸುಗುಣ ಜ್ಯುವೇಲರಿ ಶಾಪ್‌ನ್ನು ನಡೆಸುತ್ತಾ ಬಂದಿರುತ್ತೇನೆ. ನಾನು ಗ್ರಾಹಕರಿಂದ ಬಂಗಾರವನ್ನು ಕೊಡುವ ಹಾಗೂ ಪಡೆದುಕೊಳ್ಳುವ ವ್ಯವಹಾರವನ್ನು ಮಾಡಿಕೊಂಡು ಬಂದಿರುತ್ತೇನೆ. ಶ್ರೀ ಸಾಯಿ ಸುಗುಣ ಜ್ಯುವೇಲರಿ ಶಾಪ್ ಜಿ.ಎಸ್.ಟಿ ಅಡಿಯಲ್ಲಿ ನೋಂದಣಿಯಾಗಿರುತ್ತದೆ. ನಾನು ಶ್ರೀ ಸಾಯಿ ಸುಗುಣ ಜ್ಯುವೇಲರಿ ಶಾಪ್ ವ್ಯವಹಾರಕ್ಕೆ ಸಂಬಂಧಪಟ್ಟಂತೆ 3 ತಿಂಗಳಿಗೊಮ್ಮೆ ಆದಾಯ ತೆರಿಗೆ ಇಲಾಖೆಯವರಿಗೆ ಮಾಹಿತಿಯನ್ನು ನೀಡಬೇಕಾಗುತ್ತದೆ. ದಿನನಿತ್ಯದ ವ್ಯವಹಾರಕ್ಕೆ ಸಂಬಂಧಪಟ್ಟಂತೆ ರಿಜಿಸ್ಟರನ್ನು ಪುಸ್ತಕವನ್ನು ಹಾಗಾ ಪಾವತಿ ರಶೀದಿಗಳನ್ನು ನಿರ್ವಹಣೆ ಮಾಡಬೇಕಾಗುತ್ತದೆ ಎಂದರೆ ಸರಿ. ಬಂಗಾರವನ್ನು ಖರೀದಿ ಮಾಡುವಾಗ ಸಂದರ್ಭದಲ್ಲಿ ಬಂಗಾರದ ಗುಣಮಟ್ಟತೆಯನ್ನು ನಾನೇ ಪರಿಶೀಲನೆ ಮಾಡಿ ಮೌಲ್ಯಮಾಪನ ಮಾಡುತ್ತೇನೆ ಎಂದರೆ ಸರಿ. ಮೌಲ್ಯಮಾಪನ ಮಾಡಿದ ನಂತರ ಮೂಲ ರಶೀದಿಯನ್ನು ಮಾರಾಟಗಾರರಿಗೆ ಕೊಟ್ಟು ಅದರ ನಕಲನ್ನು ನಾನು ಇಟ್ಟುಕೊಳ್ಳುತ್ತೇನೆ. ಸಾಮಾನ್ಯವಾಗಿ ಮಾರಾಟಗಾರರು ಬಂಗಾರವನ್ನು ಕೊಡಲು ಒಪ್ಪಿದ್ದಲ್ಲಿ ನಾನು ಸದರಿ ಬಂಗಾರವನ್ನು ಪಡೆದುಕೊಂಡು ಹಣವನ್ನು ಮಾರಾಟಗಾರರಿಗೆ ನೀಡಿದ್ದರ ಬಗ್ಗೆ ರಶೀದಿಯನ್ನು ನೀಡುತ್ತೇನೆ. ಹಣವನ್ನು ಕೊಡಲು ಬಾಕಿ ಇದ್ದಲ್ಲಿ ಅದನ್ನು ರಶೀದಿಯಲ್ಲಿ ನಮೂದು ಮಾಡುತ್ತೇವೆ ಎಂದರೆ ಸರಿ. ದಿನನಿತ್ಯ ಎಷ್ಟು ಬಂಗಾರದ ತಮ್ಮ ಬಳಿ ಇರುತ್ತದೆ ಎಂಬುದರ ಬಗ್ಗೆ ಆದಾಯ ತೆರಿಗೆ ಇಲಾಖೆಯವರಿಗೆ ಮಾಹಿತಿ ನೀಡಬೇಕಾಗುತ್ತದೆ ಎಂದರೆ ಸರಿ.

ಈ ದಾವೆಯ ವ್ಯವಹಾರ ನಡೆಯ ಪೂರ್ವದಲ್ಲಿ ನಾನು ವಾದಿಯ ಜೊತೆ ಸಾಕಷ್ಟು ವ್ಯವಹಾರವನ್ನು ಮಾಡಿರುತ್ತೇನೆ ಎಂದರೆ ಸರಿ. ಪೂರ್ವದಲ್ಲಿ ವಾದಿಯ ಜೊತೆ ಆದ ವ್ಯವಹಾರದ ಬಗ್ಗೆ ರಶೀದಿಯನ್ನು ವಾದಿಯವರಿಗೆ ನೀಡಿರುತ್ತೇನೆ. ನನ್ನ ಹಾಗೂ ವಾದಿಯ ಜೊತೆ ಒಳ್ಳೆಯ ವ್ಯವಹಾರ ಇತ್ತು ಎಂದರೆ ಸರಿ. ದಿನಾಂಕಃ18-09-2022ರಂದು ವಾದಿಯವರು ನನಗೆ ನೀಡಿದ ಬಂಗಾರದ ಬಗ್ಗೆ ನನ್ನ ಬಳಿ ರಶೀದಿ ಇರುವುದಿಲ್ಲ ಹಾಗೂ ವಾದಿಗೂ ರಶೀದಿಯನ್ನು ನೀಡಿದ್ದು ಇರುವುದಿಲ್ಲ. ದಿನಾಂಕಃ 18-09-2022ರಂದು ಆದ ವ್ಯವಹಾರದ ಬಗ್ಗೆ ನನ್ನ ರಿಜಿಸ್ಟರ್ ಪುಸ್ತಕದಲ್ಲಿ ನಮೂದು ಇರುವುದಿಲ್ಲ. ವಾದಿಗೆ ನಾನು ರೂ.3,00,000/- ಕೊಟ್ಟ ಬಗ್ಗೆ ರಿಜಿಸ್ಟರ್ ಪುಸ್ತಕದಲ್ಲಿ ನಮೂದು ಮಾಡಿದ್ದು ಇರುವುದಿಲ್ಲ ಎಂದರೆಸರಿ ಸಾಕ್ಷಿಯು ವಾದಿಯು ನನಗೆ ಮೊಬೈಲ್‌ನಲ್ಲಿ ಮೆಸೇಜ್ ಮಾಡಿದ ಕಾರಣ ನಾನು ರಿಜಿಸ್ಟರ್ ಪುಸ್ತಕದಲ್ಲಿ ನಮೂದು ಮಾಡಿದ್ದು ಇರುವುದಿಲ್ಲ. ಸದರಿ ಮೆಸೇಜ್ ಪ್ರತಿಯನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದು ಇರುತ್ತದೆ. ನಾನು 500 ಮುಖಬೆಲೆಯ ಒಟ್ಟು ರೂ.3,00,000/-ಗಳನ್ನು ವಾದಿಗೆ ನೀಡಿದ್ದು ಇರುತ್ತದೆ. ನಾನು ಸದರಿ ರೂ.3,00,000/-ಗಳನ್ನು ಕಾಂತು ಶೇಟ್ ರವರಿಂದ ಪಡೆದುಕೊಂಡು ವಾದಿಗೆ ನೀಡಿರುತ್ತೇನೆ. ಸದರಿ ರೂ.3,00,000/-ಗಳನ್ನು ಕಾಂತು ಶೇಟ್ ರವರಿಂದ ಪಡೆದುಕೊಂಡ ವಿಚಾರವನ್ನು ನಾನು ಉದಾಹರಣೆಯಲ್ಲಿ ಮತ್ತು ಮುಖ್ಯ ವಿಚಾರೆಯಲ್ಲಿ ಬರೆದಿದ್ದು ಇರುವುದಿಲ್ಲ. ನಾನು ರೂ.3,00,000/-ಗಳನ್ನು ವಾದಿಗೆ ನೀಡುವ ಸಂದರ್ಭದಲ್ಲಿ ವಾದಿಯ ಹೆಂಡತಿಯವರು ಹಾಜರಿದ್ದರು. ನಾನು ವಾದಿಗೆ ರೂ.3,00,000/-ಗಳನ್ನು ನೀಡಿದ ನಂತರ ಎಷ್ಟು ಹಣ ಕೊಡಲು ಬಾಕಿ ಇದೆ ಎಂದು ನಾನು ವಾದಿಗೆ ಬರೆದುಕೊಟ್ಟಿದ್ದು ಇರುವುದಿಲ್ಲ. ಸದರಿ ರೂ.3,00,000/-ಗಳನ್ನು ನೀಡಿದ ನಂತರ ಎಷ್ಟು ಹಣ ಕೊಡಲು ಬಾಕಿ ಇದೆ ಎಂದು ನಾನು ವಾದಿಗೆ ಬರೆದುಕೊಡಲು ನನಗೆ ಯಾವುದೇ ತೊಂದರೆ ಇರಲಿಲ್ಲ. ನಾನು ವಾದಿಯಿಂದ ದಿನಾಂಕಃ18-09-2022ರಂದು ಖರೀದಿ ಮಾಡಿದ ಬಂಗಾರವನ್ನು ರಿಜಿಸ್ಟರ್ ಪುಸ್ತಕದಲ್ಲಿ ನಮೂದು ಮಾಡಿದ್ದು ಇರುವುದಿಲ್ಲ.

ನಾನು ರೂ.3,00,000/-ಗಳನ್ನು ವಾದಿಗೆ ನೀಡಿದ ಬಗ್ಗೆ ರಿಜಿಸ್ಟರ್ ಪುಸ್ತಕದಲ್ಲಿ ನಮೂದು ಮಾಡಿದ್ದು ಇರುವುದಿಲ್ಲ. ನಾನು ವಾದಿಗೆ ರೂ.5,00,000/-ಗಳನ್ನು ಕೊಟ್ಟ ಬಗ್ಗೆ ಯಾವುದೇ ರಶೀದಿ ಇರುವುದಿಲ್ಲ, ಮೊಬೈಲ್‌ನಲ್ಲಿ ಮೆಸೇಜ್ ಮಾತ್ರ ಇರುತ್ತದೆ. ನಾನು ವಾದಿಗೆ ಪ್ರತಿ ಬಾರಿ ಹಣ ಕೊಟ್ಟ ಬಗ್ಗೆ ದಾಖಲೆ ಇರುತ್ತದೆ. ನಾನು ವಾದಿಗೆ ಪ್ರತಿ ಬಾರಿ ಹಣ ಕೊಟ್ಟ ನಂತರ ಎಷ್ಟು ಹಣ ಬಾಕಿ ಇದೆ ಎಂಬ ಬಗ್ಗೆ ದಾಖಲೆ ಇರುವುದಿಲ್ಲ. ರೂ.2,00,000/- ಅಧಿಕ ವ್ಯವಹಾರದ ಮೊತ್ತವನ್ನು ಬ್ಯಾಂಕ್ ಮೂಲಕ ವರ್ಗಾವಣೆ ಮಾಡಬೇಕಾಗುತ್ತದೆ ಎಂದರೆ ಸರಿ. ಯಾವುದೇ ವ್ಯವಹಾರದ ಮೊತ್ತವನ್ನು ಬ್ಯಾಂಕ್ ಮೂಲಕ ಮಾಡಬೇಕಾಗುತ್ತದೆ ಎಂದರೆ ಸರಿ.

**(ಈ ಹಂತದಲ್ಲಿ ವಾದಿಯ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯವಕಾಶವನ್ನು ಕೋರಿದ್ದರಿಂದ ಮುಂದೂಡಲಾಯಿತು)**

**ಮರು ವಿಚಾರಣೆ – ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ ಇದೆ.

ಪ್ರ.ದ.ನ್ಯಾ.ದಂ. ಕುಮಟಾ